ಓ.ಎಸ್.ನಂ.434/2019

ಡಿ .ಡಬ್ಲ್ಯೂ- 1

**<u>ದಿನಾಂಕ: 31-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:</u>** <u>ವಾದಿ ಪರ ಶ್ರೀ ಟಿ ಎಲ್ ಪಿ</u> **<u>ವಕೀಲರಿಂದ</u>**

ಭೀಮನಾಯ್ಕ ನನ್ನ ತಮ್ಮ ಆಗಿರುತ್ತಾರೆ. ನನ್ನ ತಕರಾರಿನಲ್ಲಿ ಹಾಕಿರುವ ಸಹಿ ನನ್ನದೇ ಆಗಿರುತ್ತದೆ. ನಿಪಿ-8 ರ ದಾಖಲಾತಿಯಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಭೀಮನಾಯ್ಕರವರಿಗೆ ದಾವ ಸ್ವತ್ತನ್ನು ಒಪ್ಪಿಗೆ ಮೇರೆಗೆ ನೊಂದಣಿ ಮಾಡಿಕೊಳ್ಳಲು ಬರೆದುಕೊಟ್ಟಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಯಾವ ಉದ್ದೇಶದಿಂದ ನಿಪಿ-8 ನ್ನುಬರೆದುಕೊಟ್ಟಿರುತ್ತಿರಾ ಎಂದರೆ ಸಾಕ್ಷಿ ಸಹಿ ನನ್ನದೇ ಆಗಿರುತ್ತದೆ ಆದರೆ, ನಾನು ಬರೆದುಕೊಟ್ಟಿಲ್ಲ ಎಂದು ನುಡಿದಿರುತ್ತಾರೆ. ಕರಕುಚ್ಚಿ ಗ್ರಾಮ ಪಂಚಾಯಿತಿಯಲ್ಲಿ ದಾವ ಆಸ್ತಿಯು ನಿಪಿ-3 ರ ಪ್ರಕಾರ ವಾದಿಯ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ವಾದಿಯು ದಾವ ಸ್ವತ್ತಿಗೆ ಕಂದಾಯ ಕಟ್ಟುತ್ತಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ವಾದಿಯ ಹೆಸರಿಗೆ ಒಪ್ಪಿಗೆ ಪತ್ರದ ಮೇಲೆ ಖಾತೆ ಆಗಿದ್ದು, ಕಂದಾಯ ಕಟ್ಟುತ್ತಿದ್ದು, ಸ್ವಾಧೀನದಲ್ಲಿರುವುದನ್ನು ನೀವು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

ಒಪ್ಪಿಗೆ ಪತ್ರದ ಪ್ರಕಾರ ದಾವ ಸ್ವತ್ತಿನ ಸ್ವಾಧೀನ ಬಿಡಿಸಿಕೊಳ್ಳಲು ವಾದಿಯ ಮೇಲೆ ನೀವು ದಾವೆ ಹೂಡಿರುತ್ತಿರಾ ಎಂದರೆ ಸಾಕ್ಷಿ ಯಾವುದೇ ದಾವೆ ಹಾೂಡಿರುವುದಿಲ್ಲ, ಪುನಃ ನಾವೇ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿದಿರುತ್ತಾರೆ. ಒಪ್ಪಿಗೆ ಪತ್ರವನ್ನು ನೀವು ಬರೆದುಕೊಟ್ಟಿರುವುದಿಲ್ಲ ಎಂದು ವಾದಿಯ ಮೇಲೆ ಯಾವುದಾದರೂ ದಾವೆ ಹೂಡಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ವಾದಿಯು ನಿಮ್ಮ ವಿರುದ್ಧ ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ಅವರ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದಿರಾ ಎಂದು ದೂರು ನೀಡಿರುತ್ತಾರೆಂದರೆ ಸಾಕ್ಷಿ ದೂರು ನೀಡಿರುತ್ತಾರೆ, ಆದರೆ ಸ್ವಾಧೀನದಲ್ಲಿ ನಾವೇ ಇರುತ್ತೆವೆ ಎಂದು ನುಡಿದಿರುತ್ತಾರೆ. ನಿಮ್ಮ ಖಾತೆಯಲ್ಲಿ ನ ಎಷ್ಟು ವಿಸ್ತೀರ್ಣ ನಮೂದು ಆಗಿದೆ ಎಂದು

ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದುನುಡಿದಿರುತ್ತಾರೆ. ಅಸಸ್ ಮೆಂಟ್ 297 ರ ಪೈಕಿ 92 ಇಂಟು 26 ಅಡಿ ಅದರ ಪೈಕಿ 92 ಇಂಟು 16 ಅಡಿ ನಿಮ್ಮ ಖಾತೆಯಲ್ಲಿ ನಮೂದು ಆಗಿರುತ್ತದೆ ಎಂದರೆ ಸಾಕ್ಷಿ ನೋಡಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ 92 ಇಂಟು 16 ಅಡಿ ವಾದಿಯ ಹೆಸರಿನ ಖಾತೆಯಲ್ಲಿ ನಮೂದು ಆಗಿರುತ್ತದೆ ಎಂದರೆ ಸಾಕ್ಷಿ ಇರಬಹುದು ನಾನು ನೋಡಿಲ್ಲ ಎಂದು ನುಡಿದಿರುತ್ತಾರೆ. ನೀವು ವಾದಿಯ ಹೆಸರಿಗೆ ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದು, ಈಗ ಬರೆದುಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**